KAMS710008732012

**1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಟಿ.ನರಸೀಪುರ.**

ದಿನಾಂಕಃ 18 ನೇ ದಿನ ಮಾರ್ಚ್ 2026

ಉಪಸ್ಥಿತರು: **ಶ್ರೀಮತಿ. ನಿವೇದಿತಾ ಎನ್**, ಬಿ.ಎ.ಎಲ್., ಎಲ್‌ಎಲ್.ಬಿ. ಎಲ್.ಎಲ್.ಎಂ.,
1 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಟಿ.ನರಸೀಪುರ.

# Crl.Misc./332/2012

ಅರ್ಜಿದಾರರು : ದೊಡ್ಡಮ್ಮ ಕೋಂ ನರಸಿಂಹರಾಜು,
ವಯಸ್ಸು 43 ವರ್ಷ,
ವಾಸಃ ಶೆಟ್ಟಿಹಳ್ಳಿ ಗ್ರಾಮ,
ತಲಕಾಡು ಹೋಬಳಿ,
ಟಿ.ನರಸೀಪುರ ತಾಲ್ಲೂಕು.

**ವಿರುದ್ಧ**

ಎದುರುದಾರರು : ನರಸಿಂಹರಾಜು ಬಿನ್ ಲೇಟ್ ದೊಡ್ಡಲಿಂಗಯ್ಯ,
ವಯಸ್ಕರು,
ವಾಸಃ ಬಿ.ಶೆಟ್ಟಿಹಳ್ಳಿ ಗ್ರಾಮ (ಕುಕ್ಕೂರು), ತಲಕಾಡು ಹೋಬಳಿ,
ಟಿ.ನರಸೀಪುರ ತಾಲ್ಲೂಕು.

## ಕೌಟುಂಬಿಕ ಮಹಿಳೆಯರ ದೌರ್ಜನ್ಯ ಸಂರಕ್ಷಣಾ ಅಧಿನಿಯಮ ಕೌಟುಂಬಿಕ ದೌರ್ಜನ್ಯ ಕಾಯಿದೆ ಕಲಂ.12 ರಡಿಯಲ್ಲಿ ಆದೇಶ

1. ಅರ್ಜಿದಾರರು ಎದುರುದಾರರ ವಿರುದ್ಧ ಸಂರಕ್ಷಣಾಧಿಕಾರಿಗಳಿಗೆ ಪರಿಹಾರಗಳನ್ನು ಕೋರಿ ದೂರನ್ನು ಸಲ್ಲಿಸಿರುತ್ತಾರೆ. ದೂರಿನ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಅ**. ಅರ್ಜಿದಾರರ ಮತ್ತು ಎದುರುದಾರರ ವಿವಾಹವು ಸುಮಾರು 22 ವರ್ಷಗಳ ಹಿಂದೆ ನೆರವೇರಿದ್ದು, ಪ್ರಾರಂಭದಲ್ಲಿ ಅರ್ಜಿದಾರರು ಹಾಗೂ ಎದುರುದಾರರ ಅನ್ಯೋನ್ಯವಾಗಿದ್ದು, ಮಕ್ಕಳಾದ ನಂತರ ದಿನನಿತ್ಯ ಊಟೋಪಚಾರವನ್ನು ನೀಡದೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ. ಹಾಗೂ ಎದುರುದಾರರು ಬೇರೆ ಮಹಿಳೆಯ ಜೊತೆ ಅನೈತಿಕ ಸಂಬಂಧ ಹೊಂದಿದ್ದು, ಈ ವಿಚಾರವಾಗಿ ಗಲಾಟೆಯಾಗಿರುತ್ತದೆ. ನಂತರ ದಿಃ 09/12/2012 ಅರ್ಜಿದಾರರ ಮಗಳ ಮದುವೆ ನಿಶ್ಚಯವಾಗಿದ್ದು, ಮಗಳ ಮದುವೆಯನ್ನು ಮಾಡುವುದಿಲ್ಲ ಹಾಗೂ ನಿಮಗೆ ಯಾವ ಆಸ್ತಿಯೂ ನೀಡುವುದಿಲ್ಲ ಎಂದು ಗಲಾಟೆ ಮಾಡಿರುತ್ತಾರೆ. ಹಾಗೂ ತಂದೆಯಾಗಿ ಮಗಳ ಮದುವೆಗೆ ಯಾವುದೇ ಹಣಕಾಸು ನೀಡಿರುವುದಿಲ್ಲ. ಹಾಗೂ ಹಾಲಿ ಇರುವ ಆಸ್ತಿಯನ್ನು ಅರ್ಜಿದಾರರರಿಗೆ ತಿಳಿಯದಂತೆ ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ಅಲ್ಲದೆ ಅರ್ಜಿದಾರರು ಹಾಗೂ ಅವರ ಮಕ್ಕಳನ್ನು ಎದುರುದಾರರು ಪೋಷಣೆ ಮಾಡದೆ ನಿರ್ಲಕ್ಷ್ಯ ಮಾಡಿರುತ್ತಾರೆಂದು ಜೀವನಾಂಶವನ್ನು ಕೋರಿರುತ್ತಾರೆ. ಆದ್ದರಿಂದ, ಜೀವನಾಂಶವನ್ನು ಕೋರಿ ದೂರನ್ನು ಸಂರಕ್ಷಣಾಧಿಕಾರಿಗಳಿಗೆ ನೀಡಿದ್ದು, ಸದರಿ ಸಂರಕ್ಷಣಾಧಿಕಾರಿಗಳು ವಿಚಾರಣೆ ಆದ ಬಳಿಕ ಸದರೀ ದೂರನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

2. ಅರ್ಜಿದಾರರು ಸಲ್ಲಿಸಿದ ಅರ್ಜಿಗೆ ಎದುರುದಾರರು ತನ್ನ ತಕರಾರು ಸಲ್ಲಿಸಿದ್ದು, ಅದರಂತೆ ಅರ್ಜಿದಾರರು ತಮ್ಮ ತಕರಾರಿನಲ್ಲಿ, ಲೇಟ್ ದೊಡ್ಡಲಿಂಗಯ್ಯ ಮತ್ತು ಪುಟ್ಟನಂಜಮ್ಮ ರವರುಗಳು ಗಂಡ ಹೆಂಡತಿಯಾಗಿದ್ದು, ಇವರಿಗೆ ಡಿ.ಸೋಮಣ್ಣ, ನಾಗರಾಜು, ಚಂದ್ರಮ್ಮ, ನರಸಿಂಹರಾಜು, ಪುಟ್ಟಗೌರಮ್ಮ, ರತ್ನಮ್ಮ ಮತ್ತು ಬಸವಣ್ಣ.ಡಿ ಎಂಬ ಒಟ್ಟು 7 ಜನ ಮಕ್ಕಳಿರುತ್ತಾರೆ. ಎದುರುದಾರರು ದಿಃ 13/06/1985 ರಂದು ನೀಲಾವತಿ ಯನ್ನು ಮದುವೆಯಾಗಿರುತ್ತಾರೆ. ಅವರ ವೈವಾಹಿಕ

ಜೀವನದ ಮೇರೆಗೆ ಪ್ರಮೋದ್, ಪ್ರಕೃತಿ ಮತ್ತು ಪ್ರವೀಣ್ ಎಂಬ 3 ಜನ ಮಕ್ಕಳು ಜನಿಸಿರುತ್ತಾರೆ. ಎದುರುದಾರರು ತನ್ನ ಹೆಂಡತಿ ನೀಲಾವತಿ ಮತ್ತು ಮಕ್ಕಳೊಂದಿಗೆ ಜೀವನ ನಡೆಸುತ್ತಿರುತ್ತಾರೆ. ಅರ್ಜಿದಾರರು ತನ್ನ ಹೆಂಡತಿಯಲ್ಲ ವೆಂದು ತಿಳಿಸಿದ್ದು, ಅರ್ಜಿದಾರರು ಕೊಳ್ಳೆಗಾಲ ತಾಲ್ಲೂಕಿನ ಮುದುಗುಂಡ ಗ್ರಾಮದ ಪುಟ್ಟಮಾದಯ್ಯ ಎನ್ನುವವರನ್ನು ಮದುವೆಯಾಗಿರುತ್ತಾರೆ. ಸದರಿ ಪುಟ್ಟಮಾದಯ್ಯ ರವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದು, ಅರ್ಜಿದಾರರು ತನ್ನ ಗಂಡ ಪುಟ್ಟಮಾದಯ್ಯ ರವರನ್ನು ಬಿಟ್ಟು ತವರು ಮನೆಯಲ್ಲಿ ವಾಸವಾಗಿರುತ್ತಾರೆ.

**ಆ.** ಎದುರುದಾರರು ಮುಂದುವರೆದು ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ತನ್ನ ಮಗನ ಕುಮ್ಮಕ್ಕಿನ ಮೇರೆಗೆ OS.No.92/2014 ದಾವಾ ವನ್ನು ಎದುರುದಾರರು ಮತ್ತು ಇನ್ನಿತರರ ವಿರುದ್ಧ ಸಲ್ಲಿಸಿದ್ದು, ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ. ಎದುರುದಾರರ ಮತ್ತು ಅರ್ಜಿದಾರರ ನಡುವೆ ಯಾವುದೇ ವೈವಾಹಿಕ ಸಂಬಂದ ಇರುವುದಿಲ್ಲ ಹಾಗೂ ಬೇರೆ ಯಾವುದೇ ಸಂಬಂದ ಇರುವುದಿಲ್ಲ. ಆದ್ದರಿಂದ ಅರ್ಜಿದಾರರರಿಗೆ ಎದುರುದಾರರು ಜೀವನಾಂಶ ನೀಡುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಮೇಲಿನ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿರುತ್ತಾರೆ.

**3.** ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನನ್ನ ತೀರ್ಮಾನಕ್ಕೆ ಬಂದಿರುತ್ತದೆ.

**ಅಂಶಃ1** ಅರ್ಜಿದಾರರು ಎದುರುದಾರನಿಂದ ಜೀವನಾಂಶ ಪಡೆಯಲು ಅರ್ಹರಾಗಿರುತ್ತಾರೆಯೇ? ಹಾಗಾದರೆ ಅರ್ಜಿದಾರರಿಗೆ ಎದುರುದಾರರು ಎಷ್ಟು ಜೀವನಾಂಶ ನೀಡಬೇಕು?

**ಅಂಶಃ2** ಯಾವ ಆದೇಶ?

**4.** ಅರ್ಜಿದಾರರ ಮತ್ತು ಎದುರುದಾರರ ಪರ ವಾದವನ್ನು ಕೇಳಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ಮೇಲಿನ ಅಂಶಗಳಿಗೆ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶಃ1: ನಕಾರಾತ್ಮಕವಾಗಿ
ಅಂಶಃ2: ಅಂತಿಮ ಆದೇಶದಂತೆ ಈ ಕೆಳಕಂಡಂತೆ.

## ಕಾರಣಗಳು

6. **ಅಂಶಃ1:** ಅರ್ಜಿದಾರರು ಎದುರುದಾರನಿಂದ ಅರ್ಜಿದಾರರಿಗೆ ರೂ.3,000/-ಗಳನ್ನು ಮಾಸಿಕವಾಗಿ ಜೀವನಾಂಶ ನೀಡುವಂತೆ ಕೋರಿರುತ್ತಾರೆ.

7. ಈ ಪ್ರಕರಣದಲ್ಲಿ ಅರ್ಜಿದಾರರು ದಿಃ 17/12/2012 ರಂದು ಸಂರಕ್ಷಣಾಧಿಕಾರಿ, ಟಿ.ನರಸೀಪುರ ರವರಿಗೆ ದೂರನ್ನು ನೀಡಿದ್ದು, ಸದರೀ ಸಂರಕ್ಷಣಾ ಅಧಿಕಾರಿಗಳು ವರದಿಯನ್ನು ಸಲ್ಲಿಸಿದ್ದು, ಸದರೀ ವರದಿಯ ಆಧಾರದ ಮೇಲೆ ಈ ಪ್ರಕರಣ ದಾಖಲಾಗಿರುತ್ತದೆ. ಅರ್ಜಿದಾರರ ಪ್ರಕಾರ ಅರ್ಜಿದಾರರ ಮತ್ತು ಎದುರುದಾರರ ವಿವಾಹವು ಸುಮಾರು 22 ವರ್ಷಗಳ ಹಿಂದೆ ನೆರವೇರಿದ್ದು, ಪ್ರಾರಂಭದಲ್ಲಿ ಅರ್ಜಿದಾರರು ಹಾಗೂ ಎದುರುದಾರರು ಅನ್ಯೋನ್ಯವಾಗಿದ್ದು, ಮಕ್ಕಳಾದ ನಂತರ ಎದುರುದಾರರು ದಿನನಿತ್ಯ ಊಟೋಪಚಾರವನ್ನು ನೀಡದೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿರುತ್ತಾರೆ. ಹಾಗೂ ಎದುರುದಾರರು ಬೇರೆ ಮಹಿಳೆಯ ಜೊತೆ ಅನೈತಿಕ ಸಂಬಂಧ ಹೊಂದಿದ್ದು, ಈ ವಿಚಾರವಾಗಿ ಗಲಾಟೆಯಾಗಿರುತ್ತದೆ. ನಂತರ ದಿಃ 09/12/2012 ಅರ್ಜಿದಾರರ ಮಗಳ ಮದುವೆ ನಿಶ್ಚಯವಾಗಿದ್ದು, ಮಗಳ ಮದುವೆಯನ್ನು ಮಾಡುವುದಿಲ್ಲ ಹಾಗೂ ನಿಮಗೆ ಯಾವ ಆಸ್ತಿಯೂ ನೀಡುವುದಿಲ್ಲ ಎಂದು ಗಲಾಟೆ ಮಾಡಿರುತ್ತಾರೆ. ಹಾಗೂ ತಂದೆಯಾಗಿ ಮಗಳ ಮದುವೆಗೆ ಯಾವುದೇ ಹಣಕಾಸು ನೀಡಿರುವುದಿಲ್ಲ. ಹಾಗೂ ಹಾಲಿ ಇರುವ ಆಸ್ತಿಯನ್ನು ಅರ್ಜಿದಾರರರಿಗೆ ತಿಳಿಯದಂತೆ ಮಾರಾಟ ಮಾಡಲು ಪ್ರಯತ್ನಿಸಿರುತ್ತಾರೆ. ಅಲ್ಲದೆ ಅರ್ಜಿದಾರರು ಹಾಗೂ ಅವರ ಮಕ್ಕಳನ್ನು ಎದುರುದಾರರು ಪೋಷಣೆ ಮಾಡದೆ ನಿರ್ಲಕ್ಷ್ಯಮಾಡಿರುತ್ತಾರೆಂದು ಜೀವನಾಂಶವನ್ನು ಕೋರಿರುತ್ತಾರೆ.

8. ಅರ್ಜಿದಾರರು ತನ್ನ ಹೆಂಡತಿಯಾಗಿರುವುದಿಲ್ಲ, ತಾನು ಲೀಲಾವತಿ ಎನ್ನುವವರನ್ನು ದಿಃ 13/06/1985 ರಂದು ಮದುವೆಯಾಗಿದ್ದು, ಮೂರು ಜನ ಮಕ್ಕಳಿರುವುದಾಗಿ ಹಾಗೂ

ಅರ್ಜಿದಾರರು ಪುಟ್ಟಮಾದಯ್ಯ ಎಂಬುವವರನ್ನು ವಿವಾಹವಾಗಿದ್ದು, ಅವರನ್ನು ಬಿಟ್ಟು ತವರು ಮನೆಯಲ್ಲಿ ವಾಸ ಮಾಡುತ್ತಿರುವುದಾಗಿ ಹೇಳಿರುತ್ತಾರೆ.

**9.** ಅರ್ಜಿದಾರರು ತಮ್ಮ ಅರ್ಜಿಯನ್ನು ರುಜುವಾತುಪಡಿಸಲು ನಿಪಿ–1 ರಿಂದ 9 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ನಿಪಿ–1 ನಮೂನೆ–1 ಆಗಿದ್ದು, ಸಂರಕ್ಷಣಾ ಅಧಿಕಾರಿಗಳು ಸಲ್ಲಿಸಿದ ವರದಿಯಾಗಿರುತ್ತದೆ, ನಿಪಿ–2 ಅರ್ಜಿದಾರರು ಸಂರಕ್ಷಣಾಧಿಕಾರಿ, ಟಿ.ನರಸೀಪುರ ರವರಿಗೆ ನೀಡಿದ ದೂರಾಗಿದ್ದು, ನಿಪಿ–3 ಕಛೇರಿಯ ನಡವಳಿಕೆ ಆಗಿದ್ದು, ನಿಪಿ–4 ಯಶವಂತ್.ಎನ್ ರವರ ಚುನಾವಣಾ ಗುರುತಿನ ಚೀಟಿ, ನಿಪಿ–5 ಯಶವಂತ್.ಎನ್ ರವರ 10 ನೇ ತರಗತಿ ಅಂಕಪಟ್ಟಿ ನಿಪಿ–6 ಯಶವಂತ್.ಎನ್ ರವರ ದ್ವಿತೀಯ ಪಿಯುಸಿ ಅಂಕಪಟ್ಟಿ, ನಿಪಿ–7 ಯಶವಂತ್.ಎನ್ ರವರ ಆಧಾರ್ ಕಾರ್ಡ್, ನಿಪಿ–8 ದೊಡ್ಡಮ್ಮನವರ ಆಧಾರ್ ಕಾರ್ಡ್, ನಿಪಿ–9 ಯಮುನಾ.ಎನ್ ರವರ 10 ನೇ ತರಗತಿ ಅಂಕಪಟ್ಟಿ ಆಗಿರುತ್ತದೆ.

**10.** ಅರ್ಜಿದಾರರು ತಮ್ಮ ಅರ್ಜಿಯನ್ನು ಪುಷ್ಟೀಕರಿಸಲು ಕೆ.ಶಿವನಾಗು ಮತ್ತು ಮಹದೇವಯ್ಯ ರವರನ್ನು ಪ್ರಾಸಾ.2 ಮತ್ತು 3 ಸಾಕ್ಷಿದಾರರನ್ನಾಗಿ ತಮ್ಮ ಪರವಾಗಿ ಸಾಕ್ಷಿ ನುಡಿಸಿರುತ್ತಾರೆ. ಪ್ರಾಸಾ.2 ಮತ್ತು 3 ರವರು ತಮ್ಮ ಮೌಖಿಕ ಸಾಕ್ಷ್ಯದಲ್ಲಿ, ಎದುರುದಾರರು ಅರ್ಜಿದಾರರನ್ನು ಹಾಗೂ ಅವರ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೆ ಕಡೆಗಣಿಸಿರುವುದಾಗಿ, ಹಾಗೂ 2 ನೇ ಮದುವೆಯಾಗಿ ಅರ್ಜಿದಾರರರಿಗೆ ದೈಹಿಕ ಹಾಗೂ ಮಾನಸಿಕವಾಗಿ ಕಿರುಕುಳ ನೀಡಿರುವುದಾಗಿ, ಇದರಿಂದ ಅರ್ಜಿದಾರರು ಮತ್ತು ಅವರ ಮಕ್ಕಳು ಜೀವನ ನಿರ್ವಹಿಸಲು ಕಷ್ಟವಾಗಿರುತ್ತದೆ ಎಂದು ಹೇಳಿರುತ್ತಾರೆ.

**11.** ಎದುರುದಾರರು ತಮ್ಮ ತಕರಾರನ್ನು ರುಜುವಾತುಪಡಿಸಲು ನಿಆರ್.1 ರಿಂದ 10 ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ನಿಆರ್.1 ಮೂಲ ಪ್ರಕೃತಿ.ಎನ್ ರವರ 7 ನೇ ತರಗತಿ ಅಂಕಪಟ್ಟಿ , ನಿಆರ್.2 ಮೂಲ ಪ್ರಕೃತಿ.ಎನ್ ರವರ 10 ನೇ ತರಗತಿ ಅಂಕಪಟ್ಟಿ , ನಿಆರ್.3 ಮೂಲ ಪ್ರವೀಣ.ಎನ್ ರವರ ಪ್ರಥಮ ಪಿಯುಸಿ ಅಂಕಪಟ್ಟಿ, ನಿಆರ್.4 ಮೂಲ ಪ್ರಮೋದ್.ಎನ್ ರವರ ಜಾತಿ ದೃಢೀಕರಣ ಪತ್ರ, ನಿಆರ್.5 ವಿವಾಹ ಮಹೋತ್ಸವ ಆಹ್ವಾನ ಪತ್ರಿಕೆ, ನಿಆರ್.6 ರಿಂದ

8 ಎದುರುದಾರರ, ಅವರ ಹೆಂಡತಿ ಲೀಲಾವತಿ ಮತ್ತು ಮಗ ಪ್ರಮೋದ್ ರವರ ಆಧಾರ್ ಕಾರ್ಡ್ ಗಳು, ನಿಆರ್.9 ಮತ್ತು 10 ಎದುರುದಾರರ ಮತ್ತು ಲೀಲಾವತಿ ರವರ ಚುನಾವಣಾ ಗುರುತಿನ ಚೀಟಿಗಳು ಆಗಿರುತ್ತವೆ.

**12.** ಎದುರುದಾರರು ತಮ್ಮ ತಕರಾರನ್ನು ರುಜುವಾತುಪಡಿಸಲು ನಂಜುಂಡಯ್ಯ ಮತ್ತು ಲೀಲಾವತಿ ರವರುಗಳನ್ನು ಆರ್.ಡಬ್ಲ್ಯೂ.2 ಮತ್ತು 3 ಎಂದು ತಮ್ಮ ಪರವಾಗಿ ಸಾಕ್ಷಿ ನುಡಿಸಿರುತ್ತಾರೆ. ಆರ್.ಡಬ್ಲ್ಯೂ.2 ಮತ್ತು 3 ರವರು ತಮ್ಮ ಮೌಖಿಕ ಸಾಕ್ಷದಲ್ಲಿ, ಎದುರುದಾರರು ಸುಮಾರು 31 ವರ್ಷಗಳ ಹಿಂದೆ ಲೀಲಾವತಿಯವರನ್ನು ಮದುವೆಯಾಗಿದ್ದು, ಅವರಿಗೆ ಮೂರು ಜನ ಮಕ್ಕಳಿರುತ್ತಾರೆ, ಹಾಗೂ ಅರ್ಜಿದಾರರರಿಗೂ ಎದುರುದಾರರಿಗೂ ಯಾವುದೇ ಸಂದಭದವಿರುವುದಿಲ್ಲ, ಅರ್ಜಿದಾರರು ಪುಟ್ಟಮಾದಯ್ಯ ರವರನ್ನು ಮದುವೆಯಾಗಿರುತ್ತಾರೆ ಎಂದು ನುಡಿದಿರುತ್ತಾರೆ.

**13.** ಅರ್ಜಿದಾರರ ಮತ್ತು ಎದುರುದಾರರ ದಾಖಲೆಗಳು ಹಾಗೂ ಮೌಖಿಕ ಸಾಕ್ಷ್ಯವನ್ನು ಪರಿಶೀಲನೆ ಮಾಡಿದಾಗ ಕಂಡುಬರುವುದೇನೆಂದರೆ ಅರ್ಜಿದಾರರು ಎದುರುದಾರರು ತನ್ನ ಗಂಡನೆಂದು ತಮಗೆ ಇಬ್ಬರು ಮಕ್ಕಳಿದ್ದು, ಅರ್ಜಿದಾರರನ್ನು ಹಾಗೂ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದೆ ಮಾನಸಿಕ ಮತ್ತು ದೈಹಿಕವಾಗಿ ಎದುರುದಾರರು ಹಿಂಸೆ ನೀಡಿದ್ದು ಹಾಗೂ ಎದುರುದಾರರು ಮತ್ತೊಂದು ಮದುವೆಯನ್ನು ಆಗಿದ್ದು ಸಂಪೂರ್ಣವಾಗಿ ಅರ್ಜಿದಾರರನ್ನು ನಿರ್ಲಕ್ಷ್ಯ ಮಾಡಿದ್ದು, ಅರ್ಜಿದಾರರಿಗೆ ಯಾವುದೇ ಆದಾಯ ಇರುವುದಿಲ್ಲ, ಇದರಿಂದ ಜೀವನ ನಡೆಸಲು ಕಷ್ಟವಾಗುತ್ತಿದ್ದು, ಎದುರುದಾರರಿಂದ ಜೀವನಾಂಶವನ್ನು ಕೊಡಿಸಬೇಕೆಂದು ಕೇಳಿರುತ್ತಾರೆ. ಸದರೀ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ್ದು ಅದರಲ್ಲಿ ಅರ್ಜಿದಾರರು ತನ್ನ ಹೆಂಡತಿ ಆಗಿರುವುದಿಲ್ಲ ಹಾಗೂ ತಾನು ಲೀಲಾವತಿ ಎನ್ನುವವರನ್ನು ಹಿಂದೂ ಸಂಪ್ರದಾಯಂತೆ ಮದುವೆ ಆಗಿದ್ದು ತನಗೆ ಮೂರು ಜನ ಮಕ್ಕಳಿದ್ದು ಸದರೀ ಯವರ ಜೊತೆ ತಾನು ವಾಸಮಾಡುತ್ತಿರುವುದಾಗಿ ಹೇಳಿರುತ್ತಾರೆ.

**14.** ಅರ್ಜಿದಾರರು ಎದುರುದಾರರನ್ನು ಮದುವೆ ಆದ ಬಗ್ಗೆ ಹಾಗೂ ಜೊತೆಯಲ್ಲಿ ಒಂದೇ ಮನೆಯಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ–4 ರಿಂದ 9 ದಾಖಲೆಗಳಲ್ಲಿ ನರಸಿಂಹರಾಜು ಹಾಗೂ ಸದರಿಯವರು ಅರ್ಜಿದಾರರ ಹೆಂಡತಿ ಎಂದು ತೋರಿಸಲಾಗಿದೆ. ಆದರೆ ಮದುವೆಯು ಎದುರುದಾರರ ಜೊತೆ ಹಿಂದೂ ಸಂಪ್ರದಾಯಂತೆ ನೆರವೇರಿದ ಬಗ್ಗೆ ದಾಖಲೆಗಳನ್ನು ಅರ್ಜಿದಾರರು ಹಾಜರುಪಡಿಸಿರುವುದಿಲ್ಲ.

**15.** ಎದುರುದಾರರು ನಿಆರ್.5 ರಂತೆ ದಿಃ 13/06/1985 ರಂದು ಲೀಲಾವತಿಯವರನ್ನು ಹಿಂದೂ ಸಂಪ್ರದಾಯದಂತೆ ಮದುವೆ ಆಗಿರುವುದು ಕಂಡುಬಂದಿರುತ್ತದೆ. ಅರ್ಜಿದಾರರು ತಮ್ಮ ಪಾಟೀಸವಾಲಿನಲ್ಲಿ ತನಗೆ ಮದುವೆ ಆಗಿ 33 ವರ್ಷ ಆಗಿರುತ್ತದೆ ಎಂದು ಹೇಳಿರುತ್ತಾರೆ. ಅವರು ಸಾಕ್ಷಿ ನುಡಿಯಲು ಬಂದಾಗ ತಮ್ಮ ವಯಸ್ಸು 46 ಎಂದು ಹೇಳಿದ್ದು ಅದರಂತೆ ಅವರಿಗೆ ಮದುವೆ ಆಗುವಾಗ 13 ವರ್ಷ. ಅಲ್ಲದೆ ಮದುವೆಯಾದ ವರ್ಷ ಅಥವಾ ಅದರ ವಿವರ ತನಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ. ದಿಃ 12/04/2017 ರಂದು ಸಲ್ಲಿಸಿದ ಮುಖ್ಯ ವಿಚಾರಣೆಯಲ್ಲಿ ತನ್ನ ಮದುವೆಯು 25 ವರ್ಷದ ಹಿಂದೆ ಎದುರುದಾರರ ಜೊತೆ ನಡೆದಿರುತ್ತದೆ ಎಂದು ಹೇಳಿದ್ದು, ಇದರಿಂದ ದಿಃ 17/12/2015 ಮತ್ತು 12/04/2017 ರಂದು ನೀಡಿದ ಹೇಳಿಕೆಗಳು ವ್ಯತಿರಿಕ್ತವಾಗಿರುತ್ತದೆ. ಇದರಿಂದ ಅರ್ಜಿದಾರರು ಎದುರುದಾರರನ್ನು ಮದುವೆಯಾಗಿರುವುದು ಸಂಶವನ್ನುಂಟು ಮಾಡುತ್ತದೆ. ಅಲ್ಲದೆ ಪ್ರಾಸಾ.2 ಮತ್ತು 3 ರವರು ಅರ್ಜಿದಾರರು ಮತ್ತು ಎದುರುದಾರರು ಒಂದೇ ಊರಿನವರಾಗಿದ್ದು, ಎದುರುದಾರರು ಅರ್ಜಿದಾರರನ್ನು ಮದುವೆ ಆಗಿರುತ್ತಾರೆ ಎಂದು ಹೇಳಿರುತ್ತಾರೆ. ಎದುರುದಾರರು ಲೀಲಾವತಿ ಎನ್ನುವವರನ್ನು ಮದುವೆ ಆಗಿರುತ್ತಾರೆ ಎಂಬ ವಿಚಾರವನ್ನು ಸದರೀ ಸಾಕ್ಷಿದಾರರುಗಳು ಸಂಪೂರ್ಣವಾಗಿ ನಿರಾಕರಿಸಿರುವುದಿಲ್ಲ. ಅಲ್ಲದೆ ಸದರೀ ಸಾಕ್ಷಿದಾರರುಗಳು ಪುರೋಹಿತರು ಮದುವೆಯ ಸಮಯದಲ್ಲಿ ಅರ್ಜಿದಾರರ ತಂದೆ ಆಗಿದ್ದರು ಎಂದು ಹೇಳಿದ್ದು ಆದರೆ ಅರ್ಜಿದಾರರು ತಮ್ಮ ಪಾಟೀಸವಾಲಿನಲ್ಲಿ ಕುಳ್ಳಯ್ಯ ಎನ್ನುವ ಪುರೋಹಿತರು ಇದ್ದರು ಎಂದು ನುಡಿದಿರುತ್ತಾರೆ. ಅಲ್ಲದೆ ಅರ್ಜಿದಾರರು ಮುಂದುವರೆದು, ಎದುರುದಾರರು ಲೀಲಾವತಿಯನ್ನು ಮದುವೆಯಾಗಿದ್ದು ತನ್ನನ್ನು ಇಟ್ಟುಕೊಂಡಿದ್ದರು ಎಂದು ಒಪ್ಪಿರುತ್ತಾರೆ.

**16.** ಎದುರುದಾರರು 2023(4) KCCR 3723 ರ ತೀರ್ಪನ್ನು ಹಾಜರುಪಡಿಸಿದ್ದು, ಅದರಲ್ಲಿ ಮಾನ್ಯ ಉಚ್ಚನಾಯಲಾಯವು ಈ ಕೆಳಗಿನಂತೆ ಚರ್ಚಿಸಿರುತ್ತದೆ.

"11. Now it is relevant to refer the dictum of Hon'ble Supreme Court in the case of Indra Sarma Vs. V.K.V.Sarma, (2013) 15 SCC 755, para Nos.22, 34 and 35.

"22. We have to first examine whether the appellant was involved in a domestic relationship with the respondent. Section 2(f) refers to five categories of relationship, such as, related by consanguinity, marriage, relationship in the nature of marriage, adoption, family members living together as a joint family, of which we are in this case, concerned with an alleged relationship in the nature of marriage.

Relationship in the nature of marriage

34. Modern Indian society through the DV Act recognizes in reality, various other forms of familial relations, shedding the idea that such relationship can only be through some acceptable modes hitherto understood. Section 2(f), as already indicated, deals with a relationship between two persons (of the opposite sec) who live or have lived together in a household when they are related by:

(a) Consasnguinity

(b) Marriage

(c) Through a relationship in the nature of marriage

(d) Adoption

(e) Family members living together as joint family.

35. The definition cluase mentions only five categories of relationships which exhausts itself since the expression "means" has been used. When a definition clause is defined to "mean" such and such, the definition is prima facie restrictive and exhaustive. Section 2(f) has not used the expression "include" so as to make the definition exhaustive. It is in that context we have to examine the meaning of the expression "relationship in the natures of marriage".

12. On careful reading of the dictum of the Hon'ble Supreme Court, it makes it clear that, certain category of persons are recognized and construed as they are living in a relationship. The said aggrieved person proves that, he or she has lived together with the respondent in the shared household at any point of time before filing the petition, he or she is entitled for maintenance. Any poiont of time means, soon before filing the petition or considerable time, not beyond the stretch of imagination.

13. On considering the definition and also the dictum of the Hon'ble Supreme Court, it appears that, the petitioner had left the house of the respondent in the year 2005 and started residing independently. The date of filing of the Criminal Miscellaneous Petition is on 11.02.2009, i.e., after lapse of four years. In the cross–examination, the petitioner had admitted that, she had not filed any case before any Court regarding cruelty against the respondent. Taking into consideration the admission, it can be construed that, the petitioner has failed to establish the cruelty as alleged by her in the petition. Unless the petitioner proves that she had been subjected to cruelty, both mentally and physically, in the shared household as a wife, she cannot entitled to have the benefit under the DV Act. However, she could not be deprived of having such maintenance under the different forum".

17. At this stage, it is necessary to discuss about Sec.2(a) of PWDV Act.

2. **Definitions**.–In this Act, unless the context otherwise requires,–

(a) "aggrieved person" means any woman who is, or has been, in a domestic relationship with the respondent and who alleges to have been subjected to any act of domestic violence by the respondent;

Sec.2(f) "domestic relationship" means a relationship between two persons who live or have, at any point of time, lived together in a shared household, when they are related by consanguinity, marriage or through a relationship in the nature of marriage, adoption or are family members living together as a joint family;

Sec.2(s) "shared household" means a household where the person aggrieved lives or at any stage has lived in a domestic relationship either singly or along with the respondent and includes such a household whether owned or tenanted either jointly by the aggrieved person and the respondent, or owned or tenanted by either of them in respect of which either the aggrieved person or the respondent or both jointly or singly have any right, title, interest or equity and includes such a household which may belong to the joint family of which the respondent is a member, irrespective of whether the respondent or the aggrieved person has any right, title or interest in the shared household;.

ಮೇಲಿನ ಕಾನೂನಿನ ಪ್ರಕಾರ ಅರ್ಜಿದಾರರು ಎದುರುದಾರರ ಹೆಂಡತಿ ಎಂದು ತೋರಿಸಲು ನಿಪಿ–5 ರಿಂದ 9 ದಾಖಲೆಗಳನ್ನು ಹೊರತುಪಡಿಸಿ ಮದುವೆಯ ಆಹ್ವಾನ ಪತ್ರಿಕೆ, ಛಾಯಾ ಚಿತ್ರ ಅಥವಾ ಪಡಿತರ ಚೀಟಿ ಹಾಗೂ ಇನ್ನಿತರೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

**17.** ಗೌರವಾನ್ವಿತ ಸರ್ವೋಚ್ಚ ನ್ಯಾಯಲಯವು ಡಿ.ವೇಲು ಸಾಮಿ ಮತ್ತು ಡಿ.ಪಚ್ಚಯ್ ಅಮ್ಮಲ್, ಪ್ರಕರಣದಲ್ಲಿ Mistress ರವರು Domestic Violence Act ಅಡಿಯಲ್ಲಿ ಪರಿಹಾರವನ್ನು ಪಡೆಯಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರರು ತಾನು

Mistress ಆಗಿದ್ದುದ್ದನ್ನು ಒಪ್ಪಿರುತ್ತಾರೆ. ಇದರಿಂದ ಅರ್ಜಿದಾರರು ಎದುರುದಾರರರಿಂದ ಜೀನಾಂಶ ಪಡೆಯಲು ಅರ್ಹರಾಗಿರುವುದಿಲ್ಲ.

18. ಮೇಲೆ ವಿವರಿಸಿದ ಹಾಗೆ ಮದುವೆಯನ್ನು ರುಜುವಾತುಪಡಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಪ್ರಕರಣ ಬಾಕಿ ಇರುವಾಗ ಅರ್ಜಿದಾರರು ಡಿಎನ್ಎ ಪರೀಕ್ಷೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಅರ್ಜಿಯು ಪುರಸ್ಕೃತ ಗೊಂಡಿದ್ದು, ಆದರೆ ಎದುರುದಾರರು ನ್ಯಾಯಾಲಯಕ್ಕೆ ಹಾಜರಿರುವುದಿಲ್ಲ. ಆದರೆ ಎದುರುದಾರರು ಹಾಜರಿಲ್ಲದೆ ಇರುವುದು ಅರ್ಜಿದಾರರಿಗೆ ಹಾಗೂ ಅರ್ಜಿದಾರರ ಪ್ರಕರಣಕ್ಕೆ ಬಲಕೊಡುವುದಿಲ್ಲ, ಏಕೆಂದರೆ ಅರ್ಜಿದಾರರು ಎದುರುದಾರರ ಜೊತೆಗೆ ಹಿಂದೂ ಸಂಪ್ರದಾಯದಂತೆ ಮದುವೆಯಾಗಿರುವುದನ್ನು ರುಜುವಾತುಪಡಿಸಿರುವುದಿಲ್ಲ. ಅಲ್ಲದೆ ತಾನು ಎದುರುದಾರರ ಜೊತೆ ಒಂದೇ ಮನೆಯಲ್ಲಿ ಗಂಡ–ಹೆಂಡತಿಯಾಗಿ ವಾಸವಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರು ಎದುರುದಾರರಿಂದ ಜೀವನಾಂಶ ಪಡೆಯಲು ಅರ್ಹಳು ಎಂಬುದನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. **ಆದುದರಿಂದ ಅಂಶಃ1 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.**

19. **ಅಂಶ 2:** ಈಮೇಲೆ ಹೇಳಿರುವ ಕಾರಣಗಳಿಗಾಗಿ ತಲುಪಿರುವ ತೀರ್ಮಾನ ಮತ್ತು ಅಭಿಪ್ರಾಯಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಕೌಟುಂಬಿಕ ದೌರ್ಜನ್ಯ ಕಾಯಿದೆ ಕಲಂ.12 ರಡಿಯಲ್ಲಿ ಸಂರಕ್ಷಣಾಧಿಕಾರಿ ಯವರು ಸಲ್ಲಿಸಿದ ಅರ್ಜಿಯನ್ನು ವಜಾಮಾಡಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಉಕ್ತಲೇಖನ ನೀಡಿ ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚಿಸಿ ತಪ್ಪುಗಳನ್ನು ಸರಿಪಡಿಸಿ ತೆರೆದ ನ್ಯಾಯಾಲಯದಲ್ಲಿ ಈ ದಿನ ಅಂದರೆ 18 ನೇ ದಿನ ಮಾರ್ಚ್ 2026 ರಂದು ಉಚ್ಚರಿಸಲಾಯಿತು)

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಟಿ.ನರಸೀಪುರ.**

**(Order pronounced in open court vide separate order)**

## ORDER

ಕೌಟುಂಬಿಕ ದೌರ್ಜನ್ಯ ಕಾಯಿದೆ ಕಲಂ.12 ರಡಿಯಲ್ಲಿ ಸಂರಕ್ಷಣಾಧಿಕಾರಿ ಯವರು ಸಲ್ಲಿಸಿದ ಅರ್ಜಿಯನ್ನು ವಜಾಮಾಡಲಾಗಿದೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಟಿ.ನರಸೀಪುರ.**